ಹುಟ್ಟಿದ, ರೂಪತಳೆದ, ಬೆಳೆದ ಬಗೆಯ ಕುರಿತೇ ಒಂದು ದೊಡ್ಡ ಪ್ರಬಂಧ ಬರೆದುಬಿಡಬಹುದು.

ಇದರಿಂದಾಚೆಗೆ ಬಂದರೆ, ರಾಜ್‌ಕುಮಾರ್ ಅವರದ್ದೇ ಆದ ಕನ್ನಡದ ಇನ್ನೊಂದು ಹಾಡು 'ನಾವಾಡುವ ನುಡಿಯೆ ಕನ್ನಡ ನುಡಿ'ಯನ್ನು ಗುನುಗದೆ ಇರಲು ಸಾಧ್ಯವೆ? ಈ ಹಾಡನ್ನು 'ಗಂಧದಗುಡಿ' ಸಿನಿಮಾದಲ್ಲಿ ಪಿ.ಬಿ. ಶ್ರೀನಿವಾಸ್ ಕಾಡುವಂತೆ ಹಾಡಿದ್ದರು. ಅದನ್ನೇ ಅದೇ ಶೀರ್ಷಿಕೆಯ ಸಿನಿಮಾದ ಎರಡನೇ ಭಾಗದಲ್ಲಿ ಖುದ್ದು ರಾಜ್‌ಕುಮಾರ್ ಹಾಡಿದರು. ತಮ್ಮ ಮಗ ಶಿವರಾಜ್‌ಕುಮಾರ್ ಅಭಿನಯಿಸಿದ್ದ ಆ ಗೀತೆಯನ್ನೂ ಇನ್ನೊಂದು ತಲೆಮಾರು ಪ್ರೀತಿಯಿಂದ ಸ್ವೀಕರಿಸಿತು. 'ಆಕಸ್ಮಿಕ' ಹಾಗೂ 'ಗಂಧದಗುಡಿ' ಎರಡೂ ಸಿನಿಮಾ ಬಿಡುಗಡೆಗೆ ಇರುವ ದಶಕಗಳ ಅಂತರಕ್ಕೂ, ಲಾಗಾಯ್ತಿನಿಂದ ಕನ್ನಡ ಸಿನಿಮಾ ಹೇಗೆ ನಾಡಿನ ಪ್ರೀತಿ ಬಣ್ಣಿಸುವ ಗೀತೆಗಳನ್ನು ನೆಚ್ಚಿಕೊಳ್ಳುತ್ತಿದೆ ಎನ್ನುವುದಕ್ಕೂ ಸಾವಯವ ಸಂಬಂಧವಿದೆ. ಕನ್ನಡ ಗೀತೆಗಳನ್ನು ಸಿನಿಮಾಗಳಲ್ಲಿ ಅಳವಡಿಸುವ ನಾಡಪ್ರೀತಿ ಪದೇಪದೇ ಕಾಣುತ್ತಲೇ ಇದೆ. ಈ ಎರಡು ಗೀತೆಗಳ ಜೊತೆಗೆ ನೆನಪಿಸಿಕೊಳ್ಳಲೇಬೇಕಾದ ಮತ್ತೊಂದು ಅನನ್ಯ ರಾಜ್‌ಗೀತೆ, 'ಚಲಿಸುವ ಮೋಡಗಳು' ಸಿನಿಮಾದ 'ಜೇನಿನ ಹೊಳೆಯೋ ಹಾಲಿನ ಮಳೆಯೋ ಸುಧೆಯೋ ಕನ್ನಡ ಸವಿ ನುಡಿಯೊ...'

1960ರ ದಶಕದ 'ವಿಜಯನಗರದ ವೀರಪುತ್ರ' ಚಿತ್ರದ 'ಅಪಾರ ಕೀರ್ತಿ ಗಳಿಸಿ ಮೆರೆವ ಭವ್ಯ ನಾಡಿದು' ಕನ್ನಡಗೀತೆಯ ಲಯ ಎಷ್ಟು ಚೆನ್ನಾಗಿದೆ. ಈ ಹಾಡೂ ಆರ್.ಎನ್. ಜಯಗೋಪಾಲ್ ಅವರ ಮೂಸೆಯಿಂದ ಹುಟ್ಟಿದ್ದು. ವಿಶ್ವನಾಥ್–ರಾಮಮೂರ್ತಿ ಸ್ವರ ಸಂಯೋಜನೆಯ ಹಾಡು ಇದು. 'ಕಣ್ತೆರೆದು ನೋಡು' ಚಿತ್ರದ 'ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ' ಎಂಬ ಜಿ.ವಿ. ಅಯ್ಯರ್ ಬರೆದ ಹಾಡಿನಲ್ಲಿನ ನಾಡಿನ ಇತಿಹಾಸದ ಬನಿಯನ್ನು ಮರೆಯಲಾದೀತೆ? 'ಮೇಯರ್ ಮುತ್ತಣ್ಣ' ಚಿತ್ರದಲ್ಲಿ ಇರುವ 'ಒಂದೇ ನಾಡು ಒಂದೇ ಕುಲವು ಒಂದೇ ದೈವವು' ಹಾಡಿನಲ್ಲಿನ ಕೋರಸ್ ನರನಾಡಿಗಳಲ್ಲಿ ನಾಡಿನ ಅಭಿಮಾನ ಉಕ್ಕಿಸುವಷ್ಟು ಸಶಕ್ತ.





1970ರ ದಶಕವೂ ಕನ್ನಡ ಗೀತೆಗಳಿಗೆ ಸಾಕ್ಷಿಯಾಗಿದೆ. ಪುಟ್ಟಣ್ಣ ಕಣಗಾಲರ 'ಕರುಳಿನ ಕೂಗು' ಚಿತ್ರದ 'ಅ ಆ ಇ ಈ ಕನ್ನಡದ ಅಕ್ಷರಮಾಲೆ, ಅಮ್ಮಾ ಎಂಬುದೆ ಕಂದನ ಕರುಳಿನ ಕರೆಯೋಲೆ' ಎಂಬ ಸಾಲನ್ನು ಅದೆಷ್ಟು ಶಾಲಾ ಶಿಕ್ಷಕಿಯರು ತಮ್ಮದೇ ಗೀತೆ ಎನ್ನುವಂತೆ ಅನುಕರಿಸಿಲ್ಲ. ಆರ್.ಎನ್. ಜಯಗೋಪಾಲರ ಈ ರಚನೆಗೆ ಎಂ. ರಂಗರಾವ್ ಸ್ವರ ಸಂಯೋಜನೆ ಮಾಡಿದ್ದರು. ಎಸ್. ಜಾನಕಿ ಹಾಗೂ ಬಿ.ಕೆ. ಸುಮಿತ್ರಾ ಗಾಯನದ ಮೋಡಿ ಅದರಲ್ಲಿ ಇದೆ.

ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರಿಗೂ ಕನ್ನಡ ಗೀತೆಗಳಿಗೂ ದೊಡ್ಡ ನಂಟು. ಅವರ ಕಂಠಸಿರಿಯಲ್ಲೇ ಹೆಚ್ಚು ಕನ್ನಡ ಹಾಡುಗಳು ಮೂಡಿಬಂದಿರುವುದು. 1980ರ ದಶಕದಲ್ಲಿ ಅವರ ಹಾಡುಗಳ ರುಜು ಜೋರಾಗಿತ್ತು. ಆಗಲೇ 'ತಿರುಗುಬಾಣ' ಚಿತ್ರದ 'ಇದೇ ನಾಡು ಇದೇ ಭಾಷೆ ಎಂದೆಂದು ನನ್ನದಾಗಿರಲಿ' ಎಂಬ ಹಾಡಿನಲ್ಲಿ ಖುದ್ದು ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರೇ ತೆರೆ ಮೇಲೆಯೂ ಕಾಣಿಸಿಕೊಂಡರು. ಗಾಯಕರೊಬ್ಬರನ್ನು ಸೆಲೆಬ್ರಿಟಿ ಮಾಡಿದ್ದ ಆ ಕಾಲಘಟ್ಟದ ಮಹಿಮೆ ಇದು.

ರವಿಚಂದ್ರನ್ ಸಹ ಕನ್ನಡ ನಾಡಿನ ಗೀತೆ ತಮ್ಮ ಸಿನಿಮಾದಲ್ಲಿ ಇರಬೇಕೆಂದು ಆಗೀಗ ಬಯಸಿದವರು. 'ಕರುನಾಡ ತಾಯಿ ಸದಾ ಚಿನ್ಮಯಿ' ಎಂಬ ಅವರ ಚಿತ್ರದ ಹಾಡನ್ನು ಇಂದಿಗೂ ಮದುವೆ ಮನೆಗಳಲ್ಲಿ, ಆರ್ಕೆಸ್ಟ್ರಾಗಳಲ್ಲಿ ಹಾಡುವುದನ್ನು ಕಾಣುತ್ತೇವೆ. ಆ ಹಾಡಿನಲ್ಲಿನ ಆರೋಹಣ, ಅವರೋಹಣ, ಆಗೀಗ ಇರುವ ಉಸಿರುಗಟ್ಟಿ ಹಾಡಿರುವ ವರಸೆ, ಎಂಥ ಗಾಯಕರೂ ಒಮ್ಮೆ ಪ್ರಯತ್ನಿಸಲು ಪ್ರೇರೇಪಿಸುವಂತೆ ಇರುವ ರಚನೆ. 'ಸೋಲಿಲ್ಲದ ಸರದಾರ' ಚಿತ್ರದಲ್ಲಿ ಅಂಬರೀಷ್ 'ಈ ಕನ್ನಡ ಮಣ್ಣನು ಮರಿಬೇಡ' ಎಂದು ಎಸ್‌ಪಿಬಿ ಕಂಠಕ್ಕೆ ಅಭಿನಯಿಸಿರುವುದನ್ನು ಈಗಲೂ ಟಿ.ವಿ.ಗಳಲ್ಲಿ ನೋಡಿ ಪುಳಕಗೊಳ್ಳುತ್ತೇವೆ. 'ಮಲ್ಲಿಗೆ ಹೂವೆ' ಸಿನಿಮಾದಲ್ಲಿನ 'ಅಂದವೋ ಅಂದವು ಕನ್ನಡ ನಾಡು' ಎಂಬ ಯೇಸುದಾಸ್ ಕಂಠಸಿರಿಯ ಇನ್ನೊಂದು ಕನ್ನಡಗೀತೆಯೂ ಅಂಬರೀಷ್ ನೆನಪಿನೊಟ್ಟಿಗೆ ಬೆರೆತುಕೊಂಡಿದೆ.

ವಿಷ್ಣುವರ್ಧನ್ ಸಿನಿಮಾಗಳಲ್ಲೂ ಕನ್ನಡ ಗೀತೆಗಳು ಮೇಳೈಸಿರುವ ಹಲವು ಉದಾಹರಣೆಗಳಿವೆ. 'ಕೃಷ್ಣ ರುಕ್ಮಿಣಿ' ಸಿನಿಮಾದ 'ಕರ್ನಾಟಕದ ಇತಿಹಾಸದಲಿ ಬಂಗಾರದ ಯುಗದ ಕಥೆಯನ್ನು' ಎನ್ನುವ ಗೀತೆಯಾಗಲೀ, 'ಮೋಜುಗಾರ ಸೊಗಸುಗಾರ' ಚಿತ್ರದ 'ಕನ್ನಡವೆ ನಮ್ಮಮ್ಮ' ಎಂಬ ಅವರದ್ದೇ ಕಂಠದ ಹಾಡಾಗಲೀ ಇಂದಿಗೂ ನೆನಪಿನಲ್ಲಿವೆ. 'ಕಲ್ಲಾದರೆ ನಾನು ಬೇಲೂರಿನ ಗುಡಿಯಲಿ ಇರುವೆ' ಎಂದವರೂ ಅವರೇ. ಪುನೀತ್ ರಾಜ್‌ಕುಮಾರ್ ಕೂಡ 'ಜೀವ ಕನ್ನಡ ದೇಹ ಕನ್ನಡ' ಎಂದು ಕನ್ನಡಗೀತೆಗೆ ನೃತ್ಯದ ಅಂಗಿಯನ್ನೂ ತೊಡಿಸಿದ್ದರು. 'ಸಮರ' ಸಿನಿಮಾದಲ್ಲಿ ಶಿವರಾಜ್‌ಕುಮಾರ್ ಕೂಡ 'ಕನ್ನಡದ ಮಾತು ಚೆನ್ನ' ಗೀತೆಗೆ ಕುಣಿದಿದ್ದವರೆ. ಆ ಹಾಡನ್ನು ರಾಜ್‌ಕುಮಾರ್ ಅವರೇ ಹಾಡಿದ್ದರೆನ್ನುವುದು ಇನ್ನೊಂದು ವಿಶೇಷ. 'ಎಕೆ 47' ಸಿನಿಮಾದ 'ನಾನು ಕನ್ನಡದ ಕಂದ' ಎಂಬ ಇನ್ನೊಂದು ಹಾಡಿನಲ್ಲಿ ಭಾವುಕವೂ ಗಂಭೀರವೂ ಆದ ದನಿಯಿದೆ.

ರವಿಚಂದ್ರನ್ ಹಾಗೂ ಎಲ್.ಎನ್. ಶಾಸ್ತ್ರಿ ಇಬ್ಬರೂ ಸೇರಿ 'ಕರುನಾಡೇ ಕೈ ಚಾಚಿದೆ ನೋಡೇ' ಎಂಬ ಮಜಾ ಕೊಡುವ ಕನ್ನಡದ ಹಾಡನ್ನು 'ಮಲ್ಲ' ಸಿನಿಮಾದಲ್ಲಿ ಕೊಟ್ಟರು. ಆ ಹಾಡಿನ ಚಿತ್ರೀಕರಣಕ್ಕೆಂದೇ ಅದೆಷ್ಟೋ ಕೋಳಿಪಿಳ್ಳೆಗಳನ್ನು ರವಿಚಂದ್ರನ್ ತರಿಸಿ, ಅವಕ್ಕೆಲ್ಲ ಕೆಂಪು, ಹಳದಿ ಬಣ್ಣ ಮೆತ್ತಿಸಿದ್ದರು.

ಹಂಸಲೇಖ ಕಳೆದ ಕೆಲವು ದಶಕಗಳಲ್ಲಿ ಹೆಚ್ಚು ಕನ್ನಡ ಗೀತೆಗಳನ್ನು ನಾಡಿಗೆ ಕೊಟ್ಟವರು. ಅದಕ್ಕೂ ಮೊದಲು ಆರ್.ಎನ್. ಜಯಗೋಪಾಲ್ ಆ ಕೆಲಸವನ್ನು ಕಣ್ಣಿಗೊತ್ತಿಕೊಂಡು ಮಾಡಿದ್ದರು. 'ಕೇಳಿಸದೆ ಕಲ್ಲು ಕಲ್ಲಿನಲಿ ಕನ್ನಡ ನುಡಿ' ಎಂದು ಮಾಲಾಶ್ರೀ ತುಸು ನಾಚಿಕೆ ತುಳುಕಿಸುತ್ತಲೇ ಹಾಡುವಾಗ ಅವರ ಸೌಂದರ್ಯದ ಜೊತೆಗೆ ನಾಡಿನ ಸೌಂದರ್ಯವೂ ರಸಿಕರ ಎದೆಗೆ ಇಳಿಯುವುದು ಸೃಷ್ಟಿಕ್ರಿಯೆಯ ಸೊಗಸುಗಾರಿಕೆಯಂತೂ ಹೌದು. 'ಕನ್ನಡವೆ ತಾಯ್ನುಡಿಯು ಕರುನಾಡು ತಾಯ್ನಾಡು' ಎಂಬ 'ಅನ್ನಪೂರ್ಣ' ಚಿತ್ರದ ಗೀತೆಯಲ್ಲಿ ರಾಜ್‌ಕುಮಾರ್ ಅವರ ಭಾವಾಭಿನಯವನ್ನು ನೆನಪಿಸಿಕೊಂಡರೆ ಸಾಕು, ನಾಡಿನಾಣೆ ಹ್ಯನ್ನನಕ್ಕೆ ಹರ್ಷವಾಗುವುದು.

ಪ್ರತಿಕ್ರಿಯಿಸಿ: **feedback@sudha.co.in**